**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 88/2022

ಪಿಡಬ್ಲು :1 ಸಿಡಬ್ಲು :1

ಸಾಕ್ಷಿಯ ಹೆಸರು : ಶ್ರೀ.ಅರ್ಜುನ ಹುಲಿಗೊಪ್ಪ
ತಂದೆಯ ಹೆಸರು : ಶ್ರೀ.ರಾಮಪ್ಪ ಹುಲಿಗೊಪ್ಪ
ವಯಸ್ಸು : 35 ವರ್ಷ
ಉದ್ಯೋಗ : ವ್ಯವಸಾಯ
ವಾಸ್ತವ್ಯ : ಜಾಲಿಕಟ್ಟಿ, ತಾಲೂಕುಃ ರಾಮದುರ್ಗ
ದಿನಾಂಕ :10-02-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 4 ಸಾವಕ್ಕ ನನ್ನ ತಾಯಿ. ಚಾಸಾಃ 5 ಮುತ್ತವ್ವ ನನ್ನ ಹೆಂಡತಿ, ಚಾಸಾಃ 6 ರಾಮಪ್ಪ ನನ್ನ ತಂದೆ, ಚಾಸಾಃ 7 ಯಲ್ಲಪ್ಪ, ಚಾಸಾಃ 8 ಚುರಚಪ್ಪ, ಚಾಸಾಃ 9 ಭೀಮಪ್ಪ, ಚಾಸಾಃ 10 ರಮೇಶ ಇವರುಗಳು ನನಗೆ ಗೊತ್ತಿರುತ್ತಾರೆ, ಅವರು ನಮ್ಮ ಊರಿನವರು.

2. 1 ರಿಂದ 6 ನೇ ಆರೋಪಿತರು ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ನನಗೆ ಗೊತ್ತಿರುತ್ತಾರೆ. ನಾನು ಹಿಂದೂ ವಾಲ್ಮೀಕಿ ಜನಾಂಗಕ್ಕೆ ಸೇರಿದ್ದೇನೆ. ಆರೋಪಿತರು ಕುರುಬರ ಜಾತಿಗೆ ಸೇರಿದ್ದಾರೆ.

3. ನಮ್ಮ ಮನೆಯಿಂದ ಒಂದು ಕಿಲೋಮೀಟರ ದೂರದಲ್ಲಿ ಆರೋಪಿತರ ಮನೆ ಇದೆ. ನಾವು ಹೊಲದಲ್ಲಿ ಮನೆಮಾಡಿಕೊಂಡು ವಾಸ ಇದ್ದೇವೆ. ಚಾಸಾಃ 7 ಯಲ್ಲಪ್ಪ ಅವರ ಮನೆ ನಮ್ಮ ಮನೆಯಿಂದ ಒಂದು ಕಿಲೋಮೀಟರ ದೂರದಲ್ಲಿದೆ. ಅವರು ಊರಿನ ಒಳಗೆ ವಾಸ ಇದ್ದಾರೆ. ಆರೋಪಿತರು ನಮಗೆ ಜಾತಿ ಹೆಸರು ಹಿಡಿದು ಬೈದಿರುತ್ತಾರೆ.

4. ನಾಲ್ಕು ವರ್ಷಗಳ ಹಿಂದೆ ರಾತ್ರಿ 11:00 –11:30 ರ ಸಮಯದಲ್ಲಿ ನಾವು ತೋಟದ ಮನೆಯಲ್ಲಿದ್ದಾಗ 1ನೇ ಆರೋಪಿ ಶ್ರೀನಾಥ ಕಾಂಬಳೆ, 2ನೇ ಆರೋಪಿ ಸಿದ್ದಪ್ಪ ಕಾಂಬಳೆ, 3ನೇ ಆರೋಪಿ ಫಕೀರಪ್ಪ ಶಾನವಾಡ, 4ನೇ ಆರೋಪಿ ಮೈಲಾರಿ, 5ನೇ ಆರೋಪಿ ಯಲ್ಲಪ್ಪ ಕಾಂಬಳೆ, 6ನೇ ಆರೋಪಿ ಸಣ್ಣ ಸಿದ್ದಪ್ಪ ಮತ್ತು ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಉಗ್ರಪ್ಪ ಇವರೆಲ್ಲರೂ ನಮ್ಮ ತೋಟದ ಮನೆಗೆ ನುಗ್ಗಿ ನನಗೂ ಮತ್ತು ನಮ್ಮ ತಾಯಿಗೂ ಬೈದು ಬಡಿಗೆಯಿಂದ ಹೊಡೆದಿರುತ್ತಾರೆ. 2ನೇ ಆರೋಪಿ ಬಡಿಗೆಯಿಂದ ನನ್ನ ಬೆನ್ನಿನ ಮೇಲೆ ಹೊಡೆದಿರುತ್ತಾನೆ. ಅಷ್ಟು ಜನರು ಸೇರಿ ನಮ್ಮ ತಾಯಿಗೆ, ನನ್ನ ತಂದೆಗೆ ಮತ್ತು ನನ್ನ ಹೆಂಡತಿಗೆ ಬಡಿಗೆಯಿಂದ, ಕಲ್ಲಿನಿಂದ ಮತ್ತು ಕೈಯಿಂದ ಹೊಡೆದಿರುತ್ತಾರೆ. ನನಗೆ ನನ್ನ ಬೆನ್ನಿನ ಮೇಲೆ ಡುಬ್ಬದ ಮೇಲೆ ಏಟು ಬಿದ್ದಿತ್ತು. ನಮ್ಮ ತಾಯಿಗೆ ತಲೆಯ ಮೇಲೆ ಮತ್ತು ಕೈ ಮೇಲೆ ಏಟು ಬಿದ್ದಿತ್ತು. ನನ್ನ ಹೆಂಡತಿಗೆ ಬೆನ್ನಿನ ಮೇಲೆ ಏಟು ಬಿದ್ದಿತ್ತು. ನಮ್ಮ ತಂದೆಗೆ ಹೊಟ್ಟೆ ಮತ್ತು ಡುಬ್ಬದ ಮೇಲೆ ಏಟು ಬಿದ್ದಿತ್ತು.

5. ಜಗಳವನ್ನು ಯಾರೂ ಬಿಡಿಸಿರುವುದಿಲ್ಲ. ಆರೋಪಿತರಿಗೂ ಮತ್ತು ನಮಗೂ ಹೊಲ ಮತ್ತು ಮನೆಯ ವಿಚಾರದಲ್ಲಿ ಮೊದಲಿನಿಂದಲೂ ಜಗಳ ಇತ್ತು, ಆ ದ್ವೇಷದಿಂದ ಬಂದು ನಮಗೆ ಹೊಡೆದಿರುತ್ತಾರೆ.

6. ಚಾಸಾಃ 12 ಯಲ್ಲಪ್ಪ ರಾಮಪ್ಪ ಹುಲಿಗೊಪ್ಪ ನನಗೆ ಅಣ್ಣನಾಗಬೇಕು. ಈ ಘಟನೆ ಆಗುವ ಎರಡು ದಿನಗಳ ಮೊದಲು ಚಾಸಾಃ 12 ಯಲ್ಲಪ್ಪ ರಾಮಪ್ಪ ಹುಲಿಗೊಪ್ಪ ರಾತ್ರಿ 9:30 ರ ಸಮಯದಲ್ಲಿ ಚಾಸಾಃ 7 ಯಲ್ಲಪ್ಪ ಕಾಂಬಳೆ ಅವರ ಮನೆಗೆ ನೀರು ಕುಡಿಯಲು ಹೋಗಿದ್ದರು. ಆ ಸಮಯದಲ್ಲಿ ಚಾಸಾಃ 12 ಯಲ್ಲಪ್ಪ ರಾಮಪ್ಪ ಹುಲಿಗೊಪ್ಪ ಅವರು ಚಾಸಾಃ 7 ಯಲ್ಲಪ್ಪ ಕಾಂಬಳೆ ಅವರ ಮಗಳ ಕಾಲು ತುಳಿದರು ಎನ್ನುವ ಕಾರಣಕ್ಕೆ ಚಾಸಾಃ 12 ಯಲ್ಲಪ್ಪ ಹುಲಿಗೊಪ್ಪ ಅವರನ್ನು ಚಾಸಾಃ 7 ಯಲ್ಲಪ್ಪ ಕಾಂಬಳೆ ಅವರ ಮನೆಯವರು ಊರಿನ ದೇವಸ್ಥಾನದ ಕಂಬಕ್ಕೆ ಕಟ್ಟಿ ಹಾಕಿ ಹೊಡೆದು

ನಂತರ ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿದ್ದರು. ಆ ವಿಚಾರದಲ್ಲಿ ಮರುದಿನ ಪೋಲಿಸ ಠಾಣೆಗೆ ಹೋಗಿ ನಾವು ಮತ್ತು ಚಾಸಾಃ 7 ಯಲ್ಲಪ್ಪ ಕಾಂಬಳೆ ಅವರ ಮನೆಯವರು ರಾಜಿ ಮಾಡಿಕೊಂಡು ಚಾಸಾಃ 12 ರವರನ್ನು ಮನೆಗೆ ಕರೆದುಕೊಂಡು ಬಂದೇವು.

7. ಅದಾದ ಎರಡು ದಿನಗಳ ನಂತರ ಆರೋಪಿತರು ನಮ್ಮ ಮನೆಗೆ ಬಂದು ಹೊಡೆದಿರುತ್ತಾರೆ. ನಾನು ಮತ್ತು ನಮ್ಮ ತಾಯಿ ರಾಮದುರ್ಗ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿದ್ದೇವೆ. ನಾವು ಆಸ್ಪತ್ರೆಯಲ್ಲಿದ್ದಾಗಲೇ ಪೋಲಿಸರು ನಮ್ಮನ್ನು ಭೇಟಿ ಮಾಡಲು ಬಂದಿದ್ದರು, ಆಗ ನಾವು ದೂರನ್ನು ನೀಡಿದ್ದೇವೆ.

8. ದೂರನ್ನು ಸಾಕ್ಷಿ ನೋಡಿ ಅದು ನನ್ನ ಕೈಬರವಣಿಗೆಯಲ್ಲಿ ಇಲ್ಲ ಎಂದು, ಪೋಲಿಸರು ಖಾಲಿ ಕಾಗದದ ಮೇಲೆ ನನ್ನ ಸಹಿ ಮಾಡಿಸಿಕೊಂಡು ನಂತರ ಆ ರೀತಿ ದೂರನ್ನು ಬರೆದಿರುತ್ತಾರೆ ಎಂದು ಹೇಳಿದ್ದಾರೆ.

9. ಆರೋಪಿತರು ನನಗೆ ಹೊಡೆದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.